### ಹಕ್ಕಿಗಳು ಸಾರ್ ಹಕ್ಕಿಗಳು

‘ಹಕ್ಕಿಗಳು ಸಾರ್ ಹಕ್ಕಿಗಳು’ (ಈರಣ್ಣ ಬೆಂಗಾಲಿ, ಆ. 4) ಲೇಖನದ ನಿರೂಪಣೆ ಹಾಗೂ ಸುಜಿತ್ ಅವರ ಚಿತ್ರಗಳು ಮನಮೋಹಕವಾಗಿವೆ. ರಾಯಚೂರಿನಲ್ಲಿ ಇಂತಹ ಮೋಹಕ ಪಕ್ಷಿಗಳು ಕಾಣಸಿಗುತ್ತದೆ ಎಂದು ನಂಬುವುದೇ ಕಷ್ಟಸಾಧ್ಯ.

—ರೇಖಾಚೈತನ್ಯ, ಬೆಂಗಳೂರು

### ಎಷ್ಟೊಂದು ನೋಟ

‘ಎಷ್ಟೊಂದು ನೋಟ’ (ರಹಮತ್ ತರೀಕೆರೆ, ಆ. 4) ಸಾಕಷ್ಟು ಮಾಹಿತಿ ನೀಡುವುದರ ಜತೆಗೆ ಖುಷಿಯನ್ನೂ ಕೊಟ್ಟಿತು. ಪಿಂಕ್‌ಸಿಟಿ ಜಯಪುರ ನಗರ ಮತ್ತು ಅದರ ಸುತ್ತಲಿನ ವಿಶೇಷಗಳ, ಅಲ್ಲಿನ ಹವಾ ಮಹಲ್, ಶೀಷ್ ಮಹಲ್ (ಗಾಜಿನ ಅರಮನೆ)ಗಳ ಪ್ರಸ್ತಾಪ ಇಲ್ಲದೆ, ಲೇಖನ ಯಾಕೋ ಅಪೂರ್ಣವಾದಂತೆ ಅನಿಸಿತು.

—ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

### ನಡೆದಾಡುವ ಮರಗಳ ನೋಡುತ್ತ...

‘ನಡೆದಾಡುವ ಮರಗಳ ನೋಡುತ್ತ...’ (ಕೃಷ್ಣ ಶಿರೂರ ಆ. 4) ಲೇಖನ ನಿಜವಾಗಿಯೂ ನಾವೇ ನಡೆದ ಅನುಭವ ನೀಡಿತು. ಇದರ ರಕ್ಷಣೆ ಈಗಲೂ ಪ್ರಸ್ತುತ.

—ಕೆ.ಎಸ್.ಸೋಮೇಶ್ವರ, ಬೆಂಗಳೂರು

ಲೇಖನ ಬಹಳ ಚೆನ್ನಾಗಿದೆ. ಕರಾವಳಿಯ ಎಲ್ಲಾ ನದಿಗಳ ಅಳಿವೆ ಮತ್ತು ಅಕ್ಕಪಕ್ಕದ ಕೆಸರು ಪ್ರದೇಶದಲ್ಲಿ ಕಂಡುಬರುವ ಮ್ಯಾಂಗ್ರೋವ್, ಪರಿಸರ ಸಂರಕ್ಷಣೆಗೆ ಕೊಡುವ ಕೊಡುಗೆ ಅಪಾರ.

—ಕೆ. ಗಣೇಶ ರಾಜ, ಬೆಂಗಳೂರು

## ವಿದಾಯ ಹೇಳಿದ ತಿವಿಕ್ರಮ

‘ವಿದಾಯ ಹೇಳಿದ ತಿವಿಕ್ರಮ’ (ಪ್ರವೀಣ ಕುಲಕರ್ಣಿ, ಆ. 4) ಲೇಖನದಲ್ಲಿ ಸ್ಮಶಾನ ಕೂಡ ಮೌನವಾಗ ರೋದಿಸಿದ್ದು ಓದುವಾಗ ಕಣ್ಣೀರು ತಡೆದುಕೊಳ್ಳಲಾಗಲಿಲ್ಲ.

—ಬಸವರಾಜ ಹರಿಹರ, ಧಾರವಾಡ

ನನ್ನವರೆಂಬುವರು ಯಾರೂ ಇಲ್ಲವೆನ್ನುವವರಿಗೆ ಆ ಭಗವಂತನಿರುವ ಎಂಬಂತೆ ಲಕ್ಷಾಂತರ ಅನಾಥ ಶವಗಳಿಗೆ ದೀನಬಂಧುವಾಗಿ ನಾನಿರುವೆ ಎಂದು ಜೀವನ ಸಾರ್ಥಕ್ಯವನ್ನು ಮೆರೆದ ತ್ರಿವಿಕ್ರಮ ಅವರಂಥವರು ಸಿಗುವುದು ವಿರಳ. ಅವರ ನಿಸ್ವಾರ್ಥ ಸೇವೆಯ ಕುರಿತು ಮೊಟ್ಟ ಮೊದಲು ನಾಡಿನ ಗಮನ ಸೆಳೆದ ‘ಸುಧಾ’ಳಿಗೆ ಅಭಿನಂದನೆಗಳು.

—ಅಂಬುಜಾಕ್ಷಿ ಶ್ರೀಧರ್, ಮೈಸೂರು

### ಪುತ್ರಂಜೀವಕ್ಕೆ ಹೊಸ ಜೀವ

‘ಪುತ್ರಂಜೀವಕ್ಕೆ ಹೊಸ ಜೀವ’ (ವಿನು ಗಂಗೆ, ಆ.4) ಲೇಖನ ಚೆನ್ನಾಗಿತ್ತು. ಪರಿಸರದ ರಕ್ಷಣೆಯಲ್ಲಿ ಕಾರ್ಯಪ್ರವೃತ್ತರಾಗಿ, ತಮ್ಮ ಅನುಭವವನ್ನು ಸರಳ, ಸುಂದರ ಶೈಲಿಯಲ್ಲಿ ಹಂಚಿಕೊಂಡಿದ್ದಾರೆ ಲೇಖಕರು. ಮರಗಿಡಗಳ ಕಥೆಗಳು ಕುತೂಹಲ ಮೂಡಿಸಿದರೆ, ಪರಿಸರದ ಕಾಳಜಿಯು ದಿನನಿತ್ಯದ ವ್ಯವಹಾರದ ಒಂದು ಭಾಗವಾಗಿ ಮರಗಳನ್ನು ಬೆಳೆಸುವ ಪ್ರೇರಣೆಯನ್ನು ಕೆಲವರಲ್ಲಾದರೂ ಹುಟ್ಟಬಹುದು.

—ಸಿ.ವಿ. ಶೈಲಜ

### ಜೋಪಾನ ಇದು ಮಳೆಗಾಲ

‘ಜೋಪಾನ ಇದು ಮಳೆಗಾಲ’ (ಸ್ವಯಂಪ್ರಭಾ, ಆ. 4) ಲೇಖನ ತುಂಬ ಇಷ್ಟವಾಯಿತು. ಕಾಯಿಲೆಗಳಿಂದ ಮಕ್ಕಳನ್ನು ಹೇಗೆ ರಕ್ಷಿಸಬೇಕು ಎಂಬ ಅರಿವು ಮೂಡಿಸಿರುವುದು ಚೆನ್ನಾಗಿದೆ.

—ನರಸಿಂಹ ರಾವ್, ಬೆಂಗಳೂರು

## ಕೈ–ಲಾಸಂ ಜೊತೆ ಮಾತು...



‘ಕೈ–ಲಾಸಂ ಜೊತೆ ಕಾಲ್ ಕರೆದು ಮಾತು’ (ನಾರಾಯಣ ರಾಯಚೂರ್, ಆ. 4) ಹಾಸ್ಯ ಲೇಖನ ಸೊಗಸಾಗಿದೆ. ‘ಸುಧಾ’ದ ಆರಂಭದ ದಿವಸಗಳಿಂದಲೂ ಕೈಲಾಸಮ್ ಹುಟ್ಟಿದ ದಿವಸ ಅಥವಾ ಪುಣ್ಯತಿಥಿಯ ನೆಪದಲ್ಲಿ ಅವರನ್ನು ಕುರಿತ ಲೇಖನಗಳು ಪ್ರಕಟವಾಗುತ್ತಿತ್ತು. ಒಮ್ಮೆ ಬಹುವರ್ಣದ ರಕ್ಷಾಪುಟ ಕೂಡಾ ಮುದ್ರಿತವಾಗಿತ್ತು. ಇವು ಸಾಹಿತ್ಯ, ನಾಟಕಗಳ ಆಸಕ್ತರಿಗೆ ವಿಮರ್ಶಕರಿಗೆ ರಂಜನೆ, ಮಾಹಿತಿ ನೀಡುತ್ತಿತ್ತು. ಈ ಲೇಖನ ಬಹುವರ್ಷಗಳ ನಂತರ ಆ ಪರಂಪರೆಯನ್ನು ಮುಂದುವರೆಸಿದೆ.

—ಕೆ. ವೆಂಕಟರಾಜು, ಚಾಮರಾಜನಗರ

### ಬಾಹ್ಯಾಕಾಶ ತೆರೆದ ಬಾಗಿಲು

‘ಬಾಹ್ಯಾಕಾಶ ತೆರೆದ ಬಾಗಿಲು’ (ಗುರುರಾಜ ಎಸ್. ದಾವಣಗೆರೆ, ಆ. 4) ಲೇಖನ ಇನ್ನೆಲ್ಲೂ ಓದುಗರಿಗೆ ಸಿಗದ ಪ್ರಸ್ತುತ ಅಂತರಿಕ್ಷ ಸಾಧನೆಗಳ ಖಜಾನೆಯನ್ನೇ ಸವಿವರವಾಗಿ ತೆರೆದಿಟ್ಟಿತು. ಇಸ್ರೋ ಜತೆಗೆ ಖಾಸಗಿ ಸಹಭಾಗಿತ್ವದ ಬಗ್ಗೆ ಎಲ್ಲಿಯೂ ಸಿಗದ ಮಾಹಿತಿಯನ್ನು ಬಿಚ್ಚಿಡುವುದಲ್ಲದೇ ಅದರ ಹಿನ್ನೆಲೆ, ಈಗ ಕೈಗೆತ್ತಿಕೊಂಡ ಬಾಹ್ಯಾಕಾಶ ಯೋಜನೆ, ಸಾಧನೆ ಮತ್ತು ಭವಿಷ್ಯದ ಚಿತ್ರಣ ನೀಡುವಲ್ಲಿ ಯಶಸ್ವಿಯಾಗಿದೆ.

—ನಾಗೇಶ್ ಕುಮಾರ್ ಸಿ.ಎಸ್., ಬೆಂಗಳೂರು

ಇದು ಇತ್ತೀಚಿನ ದಿನಗಳಲ್ಲಿ ‘ಸುಧಾ’ ಪ್ರಕಟಿಸಿರುವ ಅತ್ಯುತ್ತಮ ವೈಜ್ಞಾನಿಕ ಲೇಖನಗಳಲ್ಲೊಂದು. ಲೇಖಕರು, ಖಾಸಗಿಯವರಿಂದ ಆಗಲಿರುವ ಬಾಹ್ಯಾಕಾಶ ಸಾಧನೆಯ ಸಾಧ್ಯತೆಗಳ ಸುದೀರ್ಘ ವಿವರಣೆ ನೀಡಿದ್ದಾರೆ. ಭಾರತದ ಇದುವರೆಗಿನ ಬಾಹ್ಯಾಕಾಶದ ಸಾಧನೆಯು ‘ಇಸ್ರೋ’ ಒಂದರಿಂದಲೇ ಆಗಿದೆ ಎಂದುಕೊಂಡಿದ್ದೆವು. ಎಷ್ಟೊಂದು ಖಾಸಗಿ ಕಂಪನಿಗಳು ಹೇಗೆ ಕೆಲಸ ಮಾಡಿವೆ ಎಂಬುದನ್ನು ವಿವರವಾಗಿ ಕಟ್ಟಿಕೊಟ್ಟಿದ್ದಾರೆ. ಭಾರತದ ನವೋದ್ಯಮಗಳು ಮಾಡಿರುವ ಸಾಧನೆ ನಿಜಕ್ಕೂ ಮೆಚ್ಚುವಂಥದ್ದು.

—ಜ್ಯೋತಿ ಹೆಗಡೆ, ಬೆಂಗಳೂರು

## ಖರ್ಚಾಗ್ಲಿ ಅಂತ ಸಾ...

‘ಖರ್ಚಾಗ್ಲಿ ಅಂತ ಸಾ...’ (ಕರೀಗೌಡ, ಆ. 4) ಅನುಭವ ಕಥನ ಎದೆನಡುಗಿಸುವಂತಿದೆ. ಆ ಒಂದು ಮಾತು, ಹೆಣ್ಣು ಜೀವಗಳನ್ನು ವಸ್ತುಗಳಿಗಿಂತ ಕಡೆಯಾಗಿ ಪರಿಗಣಿಸುವ ಹೃದಯಹೀನ ಸಮಾಜದ ಕ್ರೌರ್ಯವನ್ನು ಬಲು ಸೂಕ್ಷ್ಮವಾಗಿ ಅನಾವರಣ ಮಾಡಿದೆ. ಐಎಎಸ್ ಅಧಿಕಾರಿಯೊಬ್ಬರ ಲೇಖನಿಯಿಂದ ಮೂಡಿಬಂದ ಬರಹ, ತನ್ನ ಲಾಲಿತ್ಯದಿಂದ ಓದಿಸಿಕೊಂಡು ಹೋಗುವಾಗ ಗಕ್ಕನೆ ಹಿಡಿದು ನಿಲ್ಲಿಸಿ ಆಂತರ್ಯವನ್ನೇ ಅಲ್ಲಾಡಿಸಿಬಿಡುವ ಇದೊಂದು ಸಾಲು ವಸ್ತುಸ್ಥಿತಿಗೆ ಹಿಡಿದ ಕನ್ನಡಿ.



—ಚಂದ್ರಪ್ರಭೆ, ಬಾಗಲಕೋಟೆ

ಅನುಭವ ಕಥನ ಓದಿ ಹೃದಯ ಕರಗಿತು. ಬದುಕುಗಳೆಷ್ಟು ಹಿಂದುಳಿದಿವೆ ಎಂಬುದರ ಪರಿಚಯ ಮಾಡಿಕೊಟ್ಟಿತು. ಇಂಥ ಅಧಿಕಾರಿಗಳ ಸ್ವಾನುಭವ ಕಥನಗಳು ಅಧಿಕಾರದ ವ್ಯಾಪ್ತಿ ಹಾಗೂ ಆಳ – ಅಗಲಗಳನ್ನು ಪರಿಚಯ ಮಾಡಿಕೊಟ್ಟು ಸಾಕಷ್ಟು ಯುವ ಮನಸ್ಸುಗಳಿಗೆ ಪ್ರೇರಣೆ ನೀಡುತ್ತವೆ.

—ರುಕ್ಮಿಣಿ ವಿ. ಪ್ರಸಾದ್

ಈ ದೇಶದಲ್ಲಿನ ಹೆಣ್ಣುಮಕ್ಕಳ ಪರಿಸ್ಥಿತಿಯನ್ನು ಈ ಬರಹ ಸೂಚಿಸುತ್ತದೆ. ಇಲ್ಲಿ ಮಹಿಳೆಯರ ಬದುಕು ಬದಲಾಗಲು ಸಾಧ್ಯವೇ ಎಂಬ ಪ್ರಶ್ನೆ ನನ್ನನ್ನು ಕಾಡುತ್ತದೆ. ಸ್ವಾತಂತ್ರ್ಯ ಬಂದು ಎಪ್ಪತ್ತೈದು ವರ್ಷಗಳಾದವು, ಇನ್ನೂ ಮಹಿಳೆಯರ ಬದುಕು ಎಷ್ಟು ದಾರುಣವಾಗಿದೆ ಎಂಬ ಸತ್ಯ ಕೊಂಚ ಸೂಕ್ಷ್ಮವಾಗಿ ನೋಡಿದರೆ ತಿಳಿಯುತ್ತದೆ. ಇದಕ್ಕೆ ಅಥವಾ ಇಂತಹ ಘಟನೆಗಳಿಗೆ ಎಲ್ಲರೂ ಜವಾಬ್ದಾರರು ಹಾಗೂ ಹೊಣೆಗಾರರು.

—ಪ್ರಮೋದ್ ಕೆ. ಕುಲಕರ್ಣಿ, ಶಹಾಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in